## ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 244

ಸದಸ್ಯರ ಹೆಸರು : ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ಸಚಿವರು : ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 12.08.2025

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಕೊಡಗು ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಈ ಬಾರಿಯ ಅವಧಿಪೂರ್ವ ಮುಂಗಾರು ಮತ್ತು ಹೆಚ್ಚಿನ ಮಳೆಯಿಂದಾಗಿ ಅಡಿಕೆಗೆ ವಿಪರೀತ ಕೊಳೆ ರೋಗ ಬಂದು ಅಡಿಕೆ ಬೆಳೆಗಾರರಿಗೆ ಅತೀವ ನಷ್ಟ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಕೊಳೆರೋಗ ಭಾದಿತ ತೋಟಗಳಿಗೆ ಇಲಾಖಾಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದ್ದಾರೆಯೇ: ಯಾವ ಗ್ರಾಮಗಳಲ್ಲಿ ಭೇಟಿ ನೀಡಿ ಪರಿಶೀಲಿಸಿದ್ದಾರೆ: | ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಕೊಡಗು ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ನಿರಂತರ ಮಳೆಯಿಂದಾಗಿ ಅಡಿಕೆ ಬೆಳೆಯಲ್ಲಿ ಔಷಧಿ ಸಿಂಪಡಣೆಗೆ ಅವಕಾಶವಿಲ್ಲದ ಕಾರಣ ಕೊಳೆ ರೋಗ ಲಕ್ಷಣಗಳು ಅಲ್ಲಲ್ಲಿ ಕಂಡು ಬಂದಿರುತ್ತದೆ.<br><br>ಇಲಾಖಾ ಅಧಿಕಾರಿಗಳು ಕೊಳೆರೋಗ ಬಾಧಿತ ತೋಟಗಳ ತಾಕಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿರುತ್ತಾರೆ. ಗ್ರಾಮಗಳಿಗೆ ಭೇಟಿ ನೀಡಿದ ವಿವರ ಕೆಳಕಂಡಂತಿದೆ. |

| ಕ್ರ ಸಂ | ಜಿಲ್ಲೆಗಳು | ಅಡಿಕೆ ಕೊಳೆರೋಗದ ಕುರಿತು ಭೇಟಿ ನೀಡಿದ ಗ್ರಾಮಗಳ ಹೆಸರು |
|---|---|---|
| 1. | ದಕ್ಷಿಣ ಕನ್ನಡ | ಮುತ್ತೂರು, ಗಂಜಿಮಠ, ಪಾವೂರು, ಮಂಜನಾಡಿ, ಬೋಳಿಯಾರ, ಬೆಳುವಾಯಿ, ಶಿರ್ತಾಡಿ, ಅಳಿಕೆ, ವಿಟ್ಲ ಕಸಬಾ, ಕೋಳ್ನಾಡು, ಪುಣಚ, ವಿಟ್ಲ ಪಡ್ನೂರು, ಇಡ್ಕಿದು, ಕೇಪು, ಕುರಿಯಾಳ, ಅಮ್ಟಾಡಿ, ಅಜ್ಜಿಬೆಟ್ಟು, ಮೂಡನಡುಗೋಡು, ಮೂಡಪಡುಕೋಡಿ, ತುಂಬೆ ಮಂಚಿ, ಸಜಿಪಮುನ್ನೂರು, ನರಿಕೊಂಬು, ಕಡೆಶ್ವಾಲಯ, ಅರಿಯಡ್ಕ, ಆರ್ಯಾಪು, ಬೆಟ್ಂಪಾಡಿ, ಬಲ್ನಾಡು, ಬಡಗನ್ನೂರು, ಹಿರೆಬಂಡಾಡಿ, ನೆಲ್ಯಾಡಿ, ಕೊಳ್ತಿಗೆ, ಕಡಬ, ಮರ್ದಾಳ, ಐತ್ತೂರು, ಕೋಡಿಂಬಾಳ, ಧರ್ಮಸ್ಥಳ, ನಿಡ್ಲೆ, ಕೊಕ್ಕಡ, ಅರಸಿನಮಕ್ಕಿ, ಬಾರ್ಯ, ತೆಕ್ಕಾರು, ತಣ್ಣೀರುಪಂಥ, ಕುವೆಟ್ಟು, ಲೈಲಾ, ನಾದ, ಉಜಿರೆ, ನಾವೂರು, ಅಳದಂಗಡಿ, ವೇಣೂರು, ಸುಲ್ಕೇರಿ, ನಾರಾವಿ ಹಾಗೂ ಸುಳ್ಯ ತಾಲ್ಲೂಕಿನ ಗ್ರಾಮ ಪಂಚಾಯಿತಿ. |
| 2. | ಉಡುಪಿ | ಪೆರ್ಡೂರು, ಶಿವಳ್ಳಿ, ಪಟ್ಲ, ಗಿಳಿಯಾರು, ಮಣೂರು, ಹನೆಹಳ್ಳಿ, ಹಾವಂಜೆ, ನೀಲಾವರ, ಉಪ್ಪೂರು, ಹಾರಾಡಿ, ಮಟ್ಟು, ಉಳಿಯಾರಗೋಳಿ, ರೆಂಜಾಳ, ಅಂಡಾರು, ಶಿರ್ಲಾಲು, ಮುಡಾರು, ದುರ್ಗಾ, ಹೆಬ್ರಿ, |

| | | | | |
|---|---|---|---|---|
| | | | | ನಲ್ಲೂರು, ಕಾಳಾವರ, ಜಪ್ತಿ, ಹಾಲಾಡಿ ಅಮಾಸೆಬೈಲು, ಶಂಕರನಾರಾಯಣ, ಅಂಪಾರು, ವಂಡ್ಸೆ, ಸಿದ್ದಾಪುರ, ಆಜ್ರಿ, ಯಡಮೊಗೆ, ಹೊಸಂಗಡಿ, ಕೊಲ್ಲೂರು, ಹಳ್ಳಿಹೊಳೆ, ಮುದೂರು, ಹೊಳಿಹೊಳೆ, ಕಿರಿಮಂಜೇಶ್ವರ. |
| | | 3. | ಚಿಕ್ಕಮಗಳೂರು | ಕಳಸ ತಾಲ್ಲೂಕಿನ ಮಾವಿನ ಕೆರೆ, ಸಂಸೆ, ಹೊರನಾಡು, ಶೃಂಗೇರಿ ತಾಲ್ಲೂಕಿನ ವಿದ್ಯಾರಣ್ಯ ಪುರ, ಅಡ್ಡಗದ್ದೆ, ಧರೆಕೊಪ್ಪ, ಬೇಗಾರ್, ಕೆರೆ, ಮಣಸೆ, ನೆಮ್ಮಾರ್, ಕಿಗ್ಗಾ, ತೆಕ್ಕೂರು, ತರೀಕೆರೆ ತಾಲ್ಲೂಕಿನ ದುಗ್ಲಾಪುರ, ಬೆಲೇನಹಳ್ಳಿ, ಬೆಟ್ಟದಹಳ್ಳಿ, ದೋರನಾಳು, ಹಾದಿಕೆರೆ, ಅಮೃತಾಪುರ, ನೇರಳೇಕೆರೆ, ಹುಣಸಘಟ್ಟ ಗ್ರಾ. ಪಂ ವ್ಯಾಪ್ತಿಗೆ ಬರುವ ಗ್ರಾಮಗಳು ಕೊಪ್ಪ ತಾಲ್ಲೂಕಿನ ಹೊನ್ನಗುಂಡಿ, ಅಗಳಗುಂಡಿ, ದಯಂಬಳ್ಳಿ, ಹರಿಹರಪುರ, ಗುಡ್ಡೇತೋಟ, ಮರಿತೋಟ್ಲು, ಸೋಮ್ಲಾಪುರ, ಅಮ್ಮಡಿ ಎಸ್ಟೇಟ್, ನರಸಿಂಹರಾಜಪುರ ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯಿತಿಗಳು. |
| | | 4. | ಕೊಡಗು | ಸಂಪಾಜೆ, ಮದೆ, ಯು. ಚೆಂಬು, ಎಂ. ಚೆಂಬು ದಬ್ಬಡ್ಕ, ಅರೆಕಲ್ಲು, ಕಳ್ಳಾಳ, ಕಾಟಕೇರಿ, ಪಿ.ಪೆರಾಜೆ, ಕೆ. ಪೆರಾಜೆ |
| | | 5. | ಶಿವಮೊಗ್ಗ | ಗುಳೇದಹಳ್ಳಿ, ವಿಠಲನಗರ, ಗೊಗ್ಗ, ನಳ್ಳಿನಕೊಪ್ಪ, ನೆಲವಾಗಿಲು, ಕಾಳೇನಹಳ್ಳಿ, ಚಿಕ್ಕಲವತ್ತಿ, ಅಮಟೆಕೊಪ್ಪ, ತಾಳಗುಂದ, ಶೀರಹಳ್ಳಿ, ಬಳ್ಳಿಗಾವಿ, ತೋಗರ್ಸಿ, ಹರಗಿ, ಬಿಳಿಕಿ, ಹಿತ್ತಲ, ಸಾಲೂರು, ಈಸೂರು, ಗಾಮ, ಹಾರೋಗೊಪ್ಪ, ಚಿಕ್ಕಜಂಬೂರು, ಕಡೇನಂದಿಹಳ್ಳಿ, ಕುಸ್ಕೂರು, ಅಂಬಾರಗೊಪ್ಪ, ಹಿರೇಜಂಬೂರು, ಮೇಳಿಗೆ, ಹಾರೋಗುಳಿಗೆ, ದೇವಂಗಿ, ಕನ್ನಂಗಿ, ದಾನಸಾಲ, ಕುಕ್ಕೆ, ಇರುವತ್ತಿ, ನಿಜಗೂರು, ಬಾರತಿಪುರ, ಆಗುಂಬೆ, ಹೊನ್ನೆತಾಳು, ಚಂಗಾರ, ಬಿದರಗೋಡು, ಯಮರವಳ್ಳಿ, ಶಂಕರಪುರ, ನೊಣಬೂರು, ಬಂದ್ಯ, ಮತ್ತೂರು, ಗೆಜ್ಜೇನಹಳ್ಳಿ, ಹಾಯ್ ಹೊಳ, ರಾಮೇನಕೊಪ್ಪ, ಮುದುವಾಲ, ಹಾರನಹಳ್ಳಿ, ಹೊಳಲೂರು, ಕುಂಸಿ, ಗಾಜನೂರು, ಉಂಬಳೆ ಬೈಲು, ಸಿರಿಯೂರು, ಹಿರಿಯೂರು, ಗೋಣಿಬೀಡು, ದೊಡ್ಡೇರಿ, ಕಲ್ಲಾಪುರ, ಹುಣಸೆಕಟ್ಟೆ, ಬಿ.ಆರ್. ಪಿ., ನಿಟ್ಟೂರು, ಹಾರೋ ಹಿತ್ತಲು, ನಂಜವಳ್ಳಿ, ಯಡೂರು, ಸುಳಗೋಡು, ಮೇಲಿನ ಸಂಪಳ್ಳಿ, ಸೊನಲೇ, ಕುಂದಗಲ್, ಕೋಡೂರು, ಹೆದ್ದಾರಿಪುರ, ಕರಿಮನೆ, ಹಾಗೂ ರಾಮಚಂದ್ರಪುರ ಮಠ. |

| | | |
|---|---|---|
| ಆ) | ಕೊಳೆ ರೋಗದಿಂದ ಬೆಳೆ ನಷ್ಟ ಉಂಟಾಗಿರುವ ರೈತರಿಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಏನು ಕ್ರಮ ಕೈಗೊಂಡಿದೆ: ಪ್ರಸಕ್ತ ವರ್ಷದಲ್ಲಿ ಕೊಳೆ ರೋಗದಿಂದ ನಷ್ಟ ಉಂಟಾದ ರೈತರಿಗೆ ಪ್ರತೀ ಎಕರೆಗೆ ಎಷ್ಟು ಪರಿಹಾರವನ್ನು ಒದಗಿಸಲಾಗುವುದು: | ಕೊಳೆ ರೋಗದಿಂದ ಬೆಳೆ ನಷ್ಟ ಉಂಟಾಗಿರುವ ರೈತರಿಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಈ ಕೆಳಕಾಣಿಸಿದ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>1. ರಾಷ್ಟ್ರೀಯ ತೋಟಗಾರಿಕೆ ಮಿಶನ್ ಯೋಜನೆಯಡಿ ಅಡಿಕೆ ಬೆಳೆ ಸೇರಿದಂತೆ ತೋಟಗಾರಿಕೆ ಬೆಳೆಗಳ ಸಮಗ್ರ ರೋಗ/ಕೀಟಗಳ ಹಾಗೂ ಪೋಷಕಾಂಶಗಳ ನಿರ್ವಹಣೆಗಾಗಿ ಘಟಕ ವೆಚ್ಚದಡಿ ಸಸ್ಯ ಸಂರಕ್ಷಣಾ ಔಷಧಿಗಳ ಖರೀದಿಗೆ ರೈತರಿಗೆ ಪ್ರತಿ ಹೆಕ್ಟೇರ್ ಗೆ ರೂ.1,500 ಗಳಂತೆ 2 ಹೆಕ್ಟೇರ್ ವರೆಗೆ ರೂ.3,000 ಗಳ ಸಹಾಯಧನ ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ರೂ.15.00 ಲಕ್ಷಗಳು ನಿಗಧಿಯಾಗಿದ್ದು, ಈವರೆಗೂ ರೂ. 3.15 ಲಕ್ಷಗಳ ಸಹಾಯಧನವನ್ನು 262 ಫಲಾನುಭವಿಗಳಿಗೆ ಪಾವತಿಸಲಾಗಿರುತ್ತದೆ.<br>2. ಮುಂಗಾರು ಮತ್ತು ಹಿಂಗಾರು ಹಂಗಾಮುಗಳಿಗೆ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆವಿಮೆ ಯೋಜನೆಯಡಿ ಜಿಲ್ಲೆಗಳಿಗೆ ಅಡಿಕೆ ಬೆಳೆಯು ಅಧಿಸೂಚಿತವಾಗಿದ್ದು, ಹವಾಮಾನ ವೈಪರೀತ್ಯದಿಂದ ಬೆಳೆ ನಷ್ಟ ಸಂಭವಿಸಿದಲ್ಲಿ ಸದರಿ ಯೋಜನೆಯಡಿ ನಷ್ಟ ಪರಿಹಾರವನ್ನು ಒದಗಿಸಲಾಗುತ್ತಿದೆ.<br>3. ಹಿಂದಿನ ಸಾಲಿನಲ್ಲಿ ಬೆಳೆ ಹಾನಿಯಾಗಿರುವ ಅಂದಾಜು 79,123.67 ಹೆಕ್ಟೇರ್ ಪ್ರದೇಶಕ್ಕೆ ಪ್ರತಿ ಹೆಕ್ಟೇರ್ ಗೆ NDRF/SDRF ಮಾರ್ಗಸೂಚಿಯನ್ವಯ ರೂ.22,500/-ಗಳಂತೆ ಅಡಿಕೆ ಕೊಳೆ ರೋಗ ಬಾಧಿತ ರೈತರಿಗೆ ಪರಿಹಾರ ಒದಗಿಸಲು ಕೇಂದ್ರ ಸರ್ಕಾರಕ್ಕೆ ರೂ.178.03 ಕೋಟಿಗಳ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. |
| ಇ) | ಅಡಿಕೆ ಕೊಳೆ ರೋಗ ತಡೆಯಲು ಯಾವೆಲ್ಲ ಔಷಧಿಗಳನ್ನು ಬಳಸಲಾಗುತ್ತಿದೆ: ಇಲಾಖೆಯಿಂದ ಈ ಔಷಧಿಗಳ ಗುಣಮಟ್ಟ ಪರೀಕ್ಷಿಸಲಾಗಿದೆಯೇ: ಔಷಧಿಗಳನ್ನು ರೈತರಿಗೆ ಕ್ಲಿಪ್ತ ಸಮಯದಲ್ಲಿ ಪೂರೈಸಲಾಗಿದೆಯೇ: ಸದರಿ ಔಷಧಿಗಳಿಗೆ ರೈತರಿಗೆ ಎಷ್ಟು ಸಬ್ಸಿಡಿಯನ್ನು ನೀಡಲಾಗುತ್ತಿದೆ: ರೈತರಿಗೆ ಈ ಔಷಧಿಯನ್ನು ಉಚಿತವಾಗಿ ಅಥವಾ ರಿಯಾಯಿತಿ ದರದಲ್ಲಿ ನೀಡಲು ಸರ್ಕಾರಕ್ಕೆ ಇರುವ ತೊಂದರೆಯೇನು? | ಅಡಿಕೆ ಕೊಳೆ ರೋಗ ನಿಯಂತ್ರಣಕ್ಕೆ ಶೇ.1 ರ ಬೋರ್ಡೋ ದ್ರಾವಣ, ಸಾಫ್, ಪ್ರೋಪಿಕೊನೋಜೋಲ್, ಕಾಪರ್ ಆಕ್ಸಿ ಕ್ಲೋರೈಡ್ ಹಾಗೂ ಇತರೆ ಶಿಲೀಂದ್ರ ನಾಶಕಗಳನ್ನು ಬಳಸಲಾಗುತ್ತಿದೆ. ಔಷಧಿಯ ಗುಣಮಟ್ಟವನ್ನು ಪರೀಕ್ಷಿಸಲಾಗಿದೆ. ಹಿಂದಿನ ಸಾಲಿನಲ್ಲಿ ಕ್ಲಿಪ್ತ ಸಮಯದಲ್ಲಿ ಪೂರೈಸಲಾಗಿದೆ.<br>ಔಷಧಿಯನ್ನು ಉಚಿತವಾಗಿ ನೀಡುವ ಪ್ರಸ್ತಾವನೆ ಇರುವುದಿಲ್ಲ. ರಾಷ್ಟ್ರೀಯ ತೋಟಗಾರಿಕೆ ಮಿಶನ್ ಯೋಜನೆಯಡಿ ಅಡಿಕೆ ಬೆಳೆ ಸೇರಿದಂತೆ ತೋಟಗಾರಿಕೆ ಬೆಳೆಗಳ ಸಮಗ್ರ ರೋಗ/ಕೀಟಗಳ ಹಾಗೂ ಪೋಷಕಾಂಶಗಳ ನಿರ್ವಹಣೆಗಾಗಿ ಘಟಕ ವೆಚ್ಚದಡಿ ಸಸ್ಯ ಸಂರಕ್ಷಣಾ ಔಷಧಿಗಳ ಖರೀದಿಗೆ ರೈತರಿಗೆ ಪ್ರತಿ ಹೆಕ್ಟೇರ್ ಗೆ ರೂ.1,500 ಗಳಂತೆ 2 ಹೆಕ್ಟೇರ್ ವರೆಗೆ ರೂ.3,000 ಗಳ ಸಹಾಯಧನ ನೀಡಲಾಗುತ್ತಿದೆ. |

HORTI 342 HGM 2025

(ಎಸ್.ಎಸ್.ಮಲ್ಲಿಕಾರ್ಜುನ್)

ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು